ಅ) ಈ ರೀತಿ ಹಾಳು ಬಿದ್ದಂತಹ ಕಟ್ಟಡಗಳನ್ನು ಪುರಸಭೆಗೆ ವಹಿಸಿಕೊಟ್ಟರೆ ಕಾಯಿಪಲ್ಯ ಮಟನ್ ಮಾರ್ಕೆಟ್ ವಗೈರಿಗಳ ಕಟ್ಟಗಳನ್ನು ನಿರ್ಮಿಸಬಹುದಲ್ಲವೆ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು?

ಇ) ಈ ಕಟ್ಟಡವನ್ನು ಕಟ್ಟುವುದರಿಂದ ಪುರಸಭೆಗೆ ಲಾಭದಾಯಕವಾಗುವುದೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಈ) ಚಿತ್ತಾಪುರ ತಾಲ್ಲೂಕಿನ ನಗರದಲ್ಲಿ ಹಾಳು ಬಿದ್ದಿರುವ ಸರ್ಕಾರಿ ಕಟ್ಟಡಗಳ ಸಂಖ್ಯೆ ಎಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ಚಿತ್ತಾಪುರ ನಗರದಲ್ಲಿ ಹಾಳು ಬಿದ್ದಿರುವ ಸರ್ಕಾರಿ ಕಟ್ಟಡಗಳುಯಾವುದು ಇರುವುದಿಲ್ಲ.

ಆ) ಮೇಲಿನ 'ಅ' ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಈ) ಚಿತ್ತಾಪುರ ನಗರದಲ್ಲಿ ಹಾಳು ಬಿದ್ದಿರುವ ಸರ್ಕಾರಿ ಕಟ್ಟಡ ಯಾವುದು ಇರುವುದಿಲ್ಲ.

ಚಿತ್ತಾಪುರ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ ಸೌಲಭ್ಯ ಒದಗಿಸುವುದು.

೩೦೧೬-ಶ್ರೀ ಬಾಬುರಾವ್ ಚಿಂಚನಸೂರ್ (ಚಿತ್ತಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಚಿತ್ತಾಪುರ ತಾಲ್ಲೂಕಿನ ಬನಬಿ, ಶೆಲ್ಲಗಿ ಮತ್ತು ಚೌಕೀತಾಂಡ ಗ್ರಾಮಗಳಲ್ಲಿರುವ ಜನರು ಕುಡಿಯುವ ನೀರಿಲ್ಲದೆ ತುಂಬಾ ತೊಂದರೆ ಪಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?

ಇ) ಈ ಗ್ರಾಮಗಳಿಗೆ ಕಿರುನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡಲಾಗುವುದೇ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಈ ಗ್ರಾಮಗಳಿಗೆ ಶಾಶ್ವತವಾಗಿ ಕುಡಿಯುವ ನೀರು ಸರಬರಾಜು ಮಾಡುವ ಯೋಜನಾಕಾರ್ಯವು ತ್ವರಿತವಾಗಿ ಮುಗಿಯುವುದೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು

ಆ) 1. **ಒನಬಿ** : ನಾಲ್ಕು ಕೊಳವೆ ಬಾವಿಗಳನ್ನು ತೋಡಿ ಕೈಪಂಪು ಜೋಡಿಸಲಾಗಿದೆ.

2. **ಶೆಳಗಿ** : ಐದು ಕೊಳವೆ ಬಾವಿಗಳನ್ನು ತೋಡಿ ಕೈ ಪಂಪು ಜೋಡಿಸಲಾಗಿದೆ.

3. **ಚೌಕಿತಾಂಡ : ಇಲ್ಲಿ ಇರುವ ಕಿರು ನೀರು ಸರಬರಾಜು ಯೋಜನೆಯನ್ನು ದುರಸ್ತಿ ಮಾಡಿ** 19.2.91ರಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಬನಜಿ ಗ್ರಾಮದ ಜನಸಂಖ್ಯೆ : ಕಮ್ಮಿ ಇರುವುದರಿಂದ, ನಿಯಮಾವಳಿಗಳ ಪ್ರಕಾರ ಈ ಗ್ರಾಮಕ್ಕೆ ಕಿರು ನೀರು ಸರಬರಾಜನ್ನು ಕೊಡಲಾಗುವುದಿಲ್ಲ. ಶಳಗಿ

ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ಮುಂದಿನ ವರ್ಷ ಕ್ರಮ ಕೈಗೊಳ್ಳಲಾಗುವುದು.

ಈ) ಈ ಗ್ರಾಮಗಳಿಗೆ ಕಿರು ನೀರು ಸರಬರಾಜು ಯೋಜನೆಗಳನ್ನು ಸದ್ಯದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಈಗಾಗಲೇ ಇರುವ ಯೋಜನೆಗಳಿಂದ ನೀರು ಸರಬರಾಜು ಯೋಜನೆಗಳು ಸದ್ಯಕ್ಕೆ ಯಾವುದೂ ಇಲ್ಲ.

ಏತ ನೀರಾವರಿ ಯೋಜನೆ ಸ್ಥಗಿತಗೊಂಡಿರುವುದು

3014 - ಶ್ರೀ ಬಾಬುರಾವ್ ಚಿಂಚನಸೂರ್ (ಚಿತ್ತಾಪುರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ತಾಪುರ ತಾಲ್ಲೂಕು ಬೆಣ್ಣೆತೊರಾ ನೀರಾವರಿ ಯೋಜನೆ ಕಾರ್ಯ ಪ್ರಾರಂಭವಾಗಿ ಹಲವಾರು ವರ್ಷಗಳು ಕಳೆದಿದ್ದರೂ ಸಹ ಇನ್ನೂ ಪೂರ್ಣಗೊಳ್ಳದಿರಲು ಕಾರಣಗಳೇನು?

ಆ) ಬೆಣ್ಣೆತೊರಾ ನೀರಾವರಿ ಯೋಜನೆಯ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರು ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ಯೋಜನೆಯ ಕಾರ್ಯ ನಿಂತಿರುವುದರಿಂದ ಇದನ್ನೇ ನಂಬಿ ಸುಮಾರು 5000 ರಿಂದ 6000 ಕೂಲಿ ಕೆಲಸಗಾರರು ಬೀದಿಪಾಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಇದಕ್ಕೆ ಯಾರು ಜವಾಬ್ದಾರರು?

ಈ) ಈ ಯೋಜನೆಗೆ ಗುತ್ತಿಗೆದಾರರು ಜವಾಬ್ದಾರರೋ ಅಥವಾ ನೇರ ಸರ್ಕಾರವೇ ಹೊಣೆಯಾಗಿದೆಯೇ (ವಿವರ ಪೂರ್ಣ ಕೊಡುವುದು)

ಉ) ಗುತ್ತಿಗೆದಾರರು ಈಯೋಜನೆಯನ್ನು ಪೂರ್ಣಗೊಳಿಸಲು ಅಸಮರ್ಥರಾದರೆ ಇವರ ಗುತ್ತಿಗೆಯನ್ನು ಮೊಟಕುಗೊಳಿಸಿ ಬೇರೆಯವರಿಗೆ ಈ ಕಾರ್ಯವನ್ನು ವಹಿಸಿಕೊಟ್ಟು ಕಾರ್ಯವನ್ನು ಪೂರ್ಣಗೊಳಿಸಲಾಗುವುದೇ?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಅನುದಾನದ ಕೊರತೆ

ಆ) ಬಂದಿದೆ.

ಇ) ಗುತ್ತಿಗೆದಾರರು ಏಪ್ರೀಲ್ 90 ರಿಂದ ಡಿಸೆಂಬರ್ 90 ರವರೆಗೆ (ಕೆಲಸ ನಿಲ್ಲಿಸುವರೆವಿಗೆ) ಯಾವುದೇ ಸಮಯದಲ್ಲಿ 285 ಜನರಿಗಿಂತ ಹೆಚ್ಚಿಗೆ ಕೂಲಿ ಕೆಲಸಗಾರರನ್ನು ನೇಮಿಸಿರಲಿಲ್ಲ. ಇದಕ್ಕೆ ಗುತ್ತಿಗೆದಾರರು ಜವಾಬ್ದಾರರು.

ಈ) ಗುತ್ತಿಗೆದಾರರೇ ಜವಾಬ್ದಾರರು.

ಉ) ಕಾರ್ಯವನ್ನು ಪೂರ್ಣಗೊಳಿಸಲು ಎಲ್ಲಾ ಪರ್ಯಾಯ ವ್ಯವಸ್ಥೆಗಳನ್ನು ಸರ್ಕಾರದಲ್ಲಿ ಪರಿಶೀಲಿಸಲಾಗುವುದು.